ನೋಡಿ ಆತನಿಗೆ ಸಿಟ್ಟು ಬಂದಿತು. ತಮ್ಮಲ್ಲಿ ಸಹಾಯ ಕೇಳಿ ಬರುವ ಈತನಿಗೆ ನೆಟ್ಟಗೆ ಕಾಗದಗಳನ್ನು ಫೈಲ್ ಮಾಡಿ ತರುವಷ್ಟು ಬುದ್ಧಿ ಇಲ್ಲವೆ ಎಂದೇನೋ ಅವರಿಗೆ ಕೋಪ ಬಂದಿರಬೇಕು. 'ಫೈಲಿನಲ್ಲಿ ಕಾಗದ ಪತ್ರಗಳನ್ನು ಹೇಗೆ ಫೈಲ್ ಮಾಡಬೇಕು ಎಂದು ಕೂಡಾ ನಿನಗೆ ತಿಳಿದಿಲ್ಲವೆ?' ಎಂದು ಬೈದು, ಫೈಲ್ ಎತ್ತಿಕೊಂಡದ್ದೇ ಭಾವೇಶ್ ಅವರ ಮುಖದ ಮೇಲೆ ಒಗೆದು ಎಸೆದರು. ಅವರು ಎಸೆದ ರಭಸಕ್ಕೆ ಫೈಲ್‌ನಲ್ಲಿದ್ದ ಅಷ್ಟೂ ಪತ್ರಗಳು ಪೂರಾ ಕ್ಯಾಬಿನ್‌ನಲ್ಲಿ ಹರಡಿ ಬಿದ್ದವು. ಬಿನ್ನಹಕ್ಕೆ ಬಾಯಿಲ್ಲದ ಸ್ಥಿತಿ. ಭಾವೇಶ್ ಬಗ್ಗಿ, ನೆಲದ ಮೇಲೆ ಹರಡಿ ಬಿದ್ದ ಒಂದೊಂದು ಪತ್ರವನ್ನೂ ತಡಕಾಡುತ್ತಾ ಎತ್ತಿಕೊಂಡು ಕೂಡಿಸಲು ಪ್ರಯತ್ನಿಸಿದರು. ಎಲ್ಲೆಲ್ಲಿ ಕಾಗದಗಳು ಬಿದ್ದಿವೆ ತಿಳಿಯದೆ ಅಷ್ಟನ್ನೂ ಕೂಡಿಸಲು ಅಸಫಲರಾಗಿದ್ದರು. ಆಗ ಆ ಮಹೋದಯರಿಗೆ ಭಾವೇಶ್‌ಗೆ ಕಣ್ಣು ಕಾಣುವುದಿಲ್ಲ ಎಂದು ಹೊಳೆಯಿತು. ತಕ್ಷಣ ಕುರ್ಚಿಯಿಂದ ಎದ್ದು ಬಂದು, ನೆಲದ ಮೇಲೆ ಬಿದ್ದ ಪತ್ರಗಳನ್ನು ಆರಿಸಿ ಸ್ವತಃ ಕೂಡಿಸಿದರು. ಅಪರಾಧಿ ಪ್ರಜ್ಞೆಯಿಂದ ತಪಿಸಿದ ಆತ, ಭಾವೇಶ್ ಅವರ ಭುಜದ ಮೇಲೆ ಕೈಯಿಟ್ಟು, 'ದಿಕರಾ ಬಾಂಧೀ ನೆ ಲಯಿ ಆವಾನು, ಆಮ್ ಕೇಮ್ ಚಾಲೆ?' ಅಂದರು. ಗುಜರಾತಿಯಲ್ಲಿ ಹೇಳಿದ ಆ ಮಾತುಗಳ ಭಾವಾರ್ಥ, 'ಬೇಟಾ, ಇವೆಲ್ಲ ಕಟ್ಟಿ ತರಬೇಕಲ್ಲವೆ. ಹೀಗೇ ಹೇಗೆ ನಡೆಯುತ್ತೆ?'. ಮತ್ತೆ ಈಗ ಫೈಲ್ ತೆಗೆದುಕೊಂಡು ಎಲ್ಲ ಪತ್ರಗಳನ್ನು ನೋಡಿ, ಆಸ್ಪತ್ರೆಯ ಖಾತೆಯಲ್ಲಿ ಒಂದು ಇಂಜೆಕ್ಷನ್‌ಗೆ ಬೇಕಾದ ಹಣವನ್ನು ಜಮೆ ಮಾಡುವುದಾಗಿ ಹೇಳಿದರು.

ಭಾವೇಶ್ ಅವರ ಕಣ್ಣುಗಳಲ್ಲಿ ನೀರು ಉಕ್ಕಿ ಬಂತು. ದುಃಖದಿಂದಲೋ, ಸಂತಸದಿಂದಲೋ ಅವರಿಗೂ ಗೊತ್ತಿರಲಿಲ್ಲ. ಅಲ್ಲಿಂದ ಹೊರಟು ಆಸ್ಪತ್ರೆಗೆ ಹಿಂತಿರುಗಿದರು. ಮರುದಿನವೇ ಅವರ ಅಕೌಂಟ್‌ಗೆ 'ಬಾಂಬೆ ಡೈಯಿಂಗ್ ಟ್ರಸ್ಟ್'ನಿಂದ ಹಣ ತಲುಪಿತ್ತು. 'ಸಾಯಿ ಬಾಬಾ ಮಂದಿರದ ಟ್ರಸ್ಟ್' ಅನ್ನೂ ಮತ್ಯಾರೋ ಸಂಪರ್ಕಿಸಿದರು. ಅಲ್ಲಿಂದಲೂ ಒಂದು ಇಂಜೆಕ್ಷನ್‌ಗೆ ಹಣ ಬಂದಿತು. 'ಸಿದ್ಧಿ ವಿನಾಯಕ ಟ್ರಸ್ಟ್'ನಿಂದಲೂ ಒಂದು ಇಂಜೆಕ್ಷನ್‌ನ ಹಣ ದೊರೆಯಿತು. ಹೀಗೇ ಸುಮಾರು 22 ಕೀಮೊ ಕೊಡಿಸಲು ಸಾಧ್ಯವಾಗಿತ್ತು.

ಅಧ್ಯಾಯ 6

## ಉದ್ಯೋಗ ಪರ್ವ

ಅಮ್ಮನಿಗೆ 13 ಕೀಮೊ ಬಾಕಿ ಇದ್ದಾಗ, ಇವರ ಓರ್ವ ಗೆಳೆಯ ಅವರನ್ನು ಅಂಧೇರಿಯಲ್ಲಿದ್ದ 'ಜರ್ಮನ್ ರೆಮಿಡೀಸ್ ಕಂಪನಿ'ಯ ಕಾರ್ಯಾಲಯಕ್ಕೆ ಕರೆದೊಯ್ದರು. ಅದೊಂದು ಔಷಧಿ ಕಂಪನಿ. ಈ ಕಂಪನಿ ಅಮ್ಮನಿಗೆ ಬೇಕಿದ್ದ ಇಂಜೆಕ್ಷನ್‌ನ ವಿತರಣೆ ಮಾಡುತ್ತಿತ್ತು. ಭಾವೇಶ್ ಅವರ ಸ್ಥಿತಿಯನ್ನು ನೋಡಿ ಕನಿಕರದಿಂದ ಆ ಕಂಪನಿಯ ಅಧಿಕಾರಿ 'ನಾನು ಈ ಇಂಜೆಕ್ಷನ್ ಅನ್ನು 30,000 ರೂಪಾಯಿಗೆ ಕೊಡುತ್ತೇನೆ' ಎಂದರು. 'ಇದರಿಂದ ನನಗೆ ಒಂದು ರೂಪಾಯಿಯ ಲಾಭವೂ ಇಲ್ಲ' ಎಂದೂ ತಿಳಿಸಿದರು. ಈ ರೀತಿ ಭಾವೇಶ್ ಅವರಿಗೆ ಇನ್ನುಳಿದ ಸುಮಾರು 13 ಇಂಜೆಕ್ಷನ್‌ಗಳು 30,000 ರೂಪಾಯಿ ಬೆಲೆಗೆ ಸಿಕ್ಕಿದವು. ಈಗ ಪ್ರತಿ ಕೀಮೊ ಚಿಕಿತ್ಸೆ ಸುಮಾರು 50000 ರೂಪಾಯಿಗಳಲ್ಲಿ ಮುಗಿಯುತ್ತಿತ್ತು.

ಇಷ್ಟು ಹೊತ್ತಿಗಾಗಲೇ, ಸ್ನೇಹಿತರು ಮತ್ತು ಸಂಬಂಧಿಗಳಿಂದ ಕಾಡಿ ಬೇಡಿ ಪಡೆದುಕೊಂಡ ಲಕ್ಷ ಲಕ್ಷಗಳ ಸಾಲದ ಹೊರೆ ಭಾವೇಶ್ ಅವರ ಹೆಗಲ ಮೇಲಿತ್ತು. ತಮ್ಮ ದೀನಾವಸ್ಥೆಯ ಬಗ್ಗೆ ಅವರಿಗೆ ಅಳುಕಿರಲಿಲ್ಲ. ಮನಸ್ಸಿನಲ್ಲಿ ಹಿಗ್ಗಿತ್ತು. ಅಮ್ಮನಿಗೆ ಯಾವುದೇ ತಡೆ ಇಲ್ಲದೆ ವೈದ್ಯರು ಹೇಳಿರುವ ಪೂರಾ 35 ಕೀಮೊ ಚಿಕಿತ್ಸೆ ಕೊಡಿಸಲು ಸಾಧ್ಯವಾಗುತ್ತಿರುವ ಹಿಗ್ಗು. ಆಗಿನ್ನೂ 35 ಕೀಮೊ ಕೊಡಿಸಿದೊಡನೆ ಅಮ್ಮ ಬದುಕಿ ಬಿಡುವಳು ಎಂಬ ಭ್ರಮೆ ಇತ್ತು.

ಈಗ ಪ್ರತಿ ಹದಿನೈದು ದಿನಕ್ಕೆ ಒಮ್ಮೆ ಕೀಮೊ ಚಿಕಿತ್ಸೆ ನಡೆಯುತ್ತಿತ್ತು. ನಂತರ ಮೂರು ಮೂರು ಕೀಮೊ ಒಂದೇ ಬಾರಿಗೆ ಕೊಡಲಾಗುತ್ತಿತ್ತು. ಆದರೆ ತಾಯಿಯ ಆರೋಗ್ಯದಲ್ಲಿ ಸುಧಾರಣೆ ಇರಲಿಲ್ಲ. ಇಷ್ಟೆಲ್ಲ ದುಬಾರಿ ಚಿಕಿತ್ಸೆಯ ನಂತರವೂ ದಿನದಿಂದ ದಿನಕ್ಕೆ ರೋಗ ಉಲ್ಬಣವಾಗುತ್ತಲೇ ಹೋಯಿತು. ಭಾವೇಶ್ ಅವರಿಗೆ ದಿಕ್ಕೇ ತೋಚದಾಗಿತ್ತು. ಅಮ್ಮನನ್ನು ಉಳಿಸಿಕೊಳ್ಳಲು ಎಂತಹ ಕಾಯಕಕ್ಕೂ ಸಿದ್ಧರಿದ್ದರು. ಆದರೆ ಎಲ್ಲಿತ್ತು ತಾಯನ್ನು ಬದುಕಿಸುವ ಆ ಸಂಜೀವಿನಿ? ಅಮ್ಮ ತಿನ್ನುವುದನ್ನೇ ನಿಲ್ಲಿಸಿಬಿಟ್ಟಿದ್ದರು. ಭಾವೇಶ್ ಏನೆಲ್ಲ ಪ್ರಯತ್ನಿಸುವರು. ಅಮ್ಮನನ್ನು ಬಿಸಿಲಲ್ಲಿ ಕೂಡಿಸುತ್ತಿದ್ದರು, ಅವರೊಡನೆ ಸದಾ ಆಶಾದಾಯಕವಾಗಿ ಮಾತನಾಡುವರು. ಕ್ಯಾರೆಟ್ ರಸ ತೆಗೆದು ಕುಡಿಸುವರು. ಹೇಗಾದರೂ ಸರಿ ಅಮ್ಮನ ಆರೋಗ್ಯವನ್ನು ಸುಧಾರಿಸುವ ಛಲ ಅವರದು.

ಸುಮಾರು ಒಂದುಒಂದೂವರೆ ವರ್ಷಗಳು ಈ ಎಲ್ಲ ಚಿಕಿತ್ಸೆ ಮುಂದುವರೆದಿತ್ತು. ಡಾ. ರೀನಾ ನಾಯರ್ ಅವರ ತಾಯಿಯ ಚಿಕಿತ್ಸೆ ಮಾಡುತ್ತಿದ್ದರು. ಕ್ಯಾನ್ಸರ್ ಕುರಿತು ಸಾಕಷ್ಟು ಸಂಶೋಧನೆ ಮಾಡಿದ್ದ ವೈದ್ಯರು ಅವರು. ಮೊದಲ ಬಾರಿ ಟಾಟಾ ಮೆಮೊರಿಯಲ್ ಆಸ್ಪತ್ರೆಗೆ ಕರೆದುಕೊಂಡು ಹೋದಾಗ, ಅಮ್ಮನ ಕ್ಯಾನ್ಸರ್ ಮೂರನೇ ಹಂತ ಕೂಡ ದಾಟಿದೆ ಎಂದು ವೈದ್ಯರು ತಿಳಿಸಿದ್ದರು. ಇಷ್ಟೆಲ್ಲ ನೋವಿನಲ್ಲಿ ಅನಾರೋಗ್ಯದಲ್ಲೂ ಆ ತಾಯಿ ದುಃಖಿಸಿ ಕೂತದ್ದನ್ನು ಭಾವೇಶ್ ಕಾಣಲಿಲ್ಲ. ಅದಕ್ಕೆ ವ್ಯತಿರಿಕ್ತವಾಗಿ ಪ್ರತಿ ಬಾರಿಯೂ ಭಾವೇಶ್‌ಗೆ ಧೈರ್ಯ ಹೇಳುವರು. ಅವರಿಗೆ ಗೊತ್ತಿತ್ತು, ತನ್ನ ಮಗ ಎಂತಹ ಕಷ್ಟಗಳ ನಡುವೆ ಹೋರಾಡುತ್ತಿದ್ದಾನೆ ಎಂದು. ಬಹುಶಃ ಅವರ ದುಃಖವನ್ನೆಲ್ಲ ಒಳಗೇ ನುಂಗಿ ನೀಲಕಂಠರಾಗಿದ್ದರು. ಆಕೆ ಕೀಮೊ ತೆಗೆದುಕೊಳ್ಳಲು ಡೇಕೇರ್‌ನಲ್ಲಿ ದಾಖಲಾದಾಗ, ಭಾವೇಶ್ ಅವರಿಗೆ ಸುತ್ತಮುತ್ತಲ ರೋಗಿಗಳ ನರಳುವಿಕೆ ಚೀತ್ಕಾರ ಕೇಳಿಸುತ್ತಿತ್ತು. ಆದರೆ ತಾಯಿ ಅತ್ಯಂತ ಶಾಂತಿಯಿಂದ ಕೀಮೋದ ನೋವನ್ನು ಸಹಿಸುತ್ತಿದ್ದಳು. ಭಾವೇಶ್ ಕ್ಯಾರೆಟ್ ರಸ ತೆಗೆದುಕೊಟ್ಟಾಗ, ಎಲೆಕೋಸಿನ ಪಲ್ಯ ಮಾಡಿದಾಗ ನಾಲಿಗೆಗೆ ಏನೂ ರುಚಿಸದಿದ್ದರೂ ಪ್ರೀತಿಯಿಂದ ತಿನ್ನುವಳು. ತನಗೆ ಜೀವ ಕೊಟ್ಟ, ತನ್ನ ಕಾಲ ಮೇಲೆ ಆತ್ಮವಿಶ್ವಾದಿಂದ ನಿಲ್ಲುವಂತೆ ಪ್ರೇರೇಪಿಸಿದ, ಹೊರ ಜಗತ್ತಿಗೆ ತನ್ನನ್ನು ಬಾಲ್ಯದಿಂದಲೇ ತಯಾರಿಸಿದ, ಸದಾ ತನಗೆ ತಂಪಿನ ನೆರಳಾಗಿ ಪ್ರೀತಿಯ ಮಡಿಲಾಗಿ, ತನ್ನ ಬದುಕಿನ ಬೆಳಕು ತೋರುವ ದೀವಟಿಯಾದ ಅಮ್ಮ, ಭಾವೇಶ್ ಅವರ ಕೈಗಳಿಂದ ಇಷ್ಟಿಷ್ಟೇ ಜಾರಿ ಹೋಗುತ್ತಿದ್ದಳು. ಭಾವೇಶ್ ಅವರ ವೀರೋಚಿತ ಹೋರಾಟದ ಆಚೆಗೂ, ಅಗಲಿಕೆ ಅನಿವಾರ್ಯವಿತ್ತು.

ದಿನಾಂಕ 20 ಫೆಬ್ರವರಿ 1994 ಬೆಳಗ್ಗೆ ಐದೂವರೆ ಗಂಟೆ ಅಮ್ಮ ಜೋರಾಗಿ ಕೂಗಿ ಕರೆದರು. ಭಾವೇಶ್ ಧಿಗ್ಗನೆದ್ದು ಅಮ್ಮನ ಬಳಿಗೆ ಓಡಿದರು. ಆದರೆ ಅಮ್ಮನ ಸಮಯ ಮುಗಿದಿತ್ತು. ಮಗನ ಕೈಯನ್ನು ಬಿಗಿಯಾಗಿ ಹಿಡಿದರು. ಮೆಲ್ಲನೊಮ್ಮೆ ತಲೆಯ ಮೇಲೆ ನಿಶ್ಯಕ್ತ ಹಸ್ತಗಳು ಸರಿದವು. ಅತಿ ಪ್ರಯಾಸದಲ್ಲಿ ಅಲುಗಿದ ತುಟಿಗಳು ಹೃದಯ ತುಂಬಿ ಆಶೀರ್ವಾದ ನೀಡಿದ್ದವು. ಬದುಕೆಲ್ಲ ದುಡಿದ ಜೀವ ಅಂತಿಮವಾಗಿ ಉಸಿರೆಳೆದು ಕಡೆಗೂ ವಿರಮಿಸಿತ್ತು. ಮಗನಿಗೆ ಯುಗವೊಂದು ಮುಗಿದಿತ್ತು. ಭಾವೇಶ್ ಒಬ್ಬಂಟಿಗರಾದರು. ವಿಧಿ ಆತನಿಗೆ ಕಣ್ಣು ಕೊಟ್ಟಿರಲಿಲ್ಲ, ಆದರೆ ಅಮ್ಮ ಆತನ ಕಣ್ಣಾಗಿದ್ದರು. ಅಮ್ಮನಿದ್ದ ಕಾರಣ, ಕಣ್ಣಿಲ್ಲ ಎಂಬ ದುಃಖವೇ ಅವರಿಗೆ ಅರಿವಾಗಿರಲಿಲ್ಲ. ಅಮ್ಮ ತೀರಿದ ಈ ಕ್ಷಣ ಭಾವೇಶನಿಗೆ ಅನಿಸಿತ್ತು, 'ದಿಟವಾದ ಅರ್ಥದಲ್ಲಿ ನಾನೀಗ ಅಂಧನಾಗಿದ್ದೇನೆ'.

ತಾಯಿಯ ಮರಣದ ನಂತರ ಭಾವೇಶ ಅವರಿಗೆ ಜಗತ್ತೇ ಕಳೆದು ಹೋಗಿತ್ತು. ಆತ ಬಹಳಷ್ಟು ಮೌನಿಯಾಗಿದ್ದರು. ಸಾವು ಮುಟ್ಟಿದ ಮನೆಗೆ ಬಂದು ಹೋಗುವ ಸ್ನೇಹಿತರು, ಸಂಬಂಧಿಗಳು ಬಹಳಷ್ಟು ಜನ ಇದ್ದರು. ಅವರೆಲ್ಲರ ನಡುವೆ ಭಾವೇಶ್ ಏಕಾಂಗಿ. ಇಲ್ಲಿಯವರೆಗೂ ಅಮ್ಮನನ್ನು ಉಳಿಸಿಕೊಳ್ಳುವುದೊಂದೇ ಅವರ ಲಕ್ಷ್ಯವಾಗಿತ್ತು. ಅವರ ಬದುಕಿನ ಪರಮ ಉದ್ದೇಶವಾಗಿತ್ತು. ಹೇಗಾದರೂ ಅಮ್ಮನನ್ನು ಉಳಿಸಿಕೊಳ್ಳಬೇಕಿತ್ತು. ಆದರೆ ಅಮ್ಮನೊಂದಿಗೆ ಈಗ ಅವರ ಬದುಕಿನ ಗುರಿಯೂ ಮರಣಿಸಿ, ಮುಗಿದುಹೋದಂತೆ ಅನಿಸಿತ್ತು. ಈ ಕತ್ತಲ ಪಯಣಕ್ಕೆ ಕೊನೆಯೆಲ್ಲಿ? ಏಕಾಏಕಿ ಭವಿಷ್ಯವೆಲ್ಲ ಘೋರಾಂಧಕಾರದ ಕಂದರಕ್ಕೆ ಜಾರಿ ಬಿದ್ದಂತೆ ಭಾಸವಾಗಿತ್ತು.

ಕುಸಿದು ಕುಳಿತ ಭಾವೇಶ್‌ನನ್ನು ಮತ್ತೆ ಅಮ್ಮನೇ ಎಚ್ಚರಿಸಿದರು. ಅಮ್ಮ ಸದಾ ಹೇಳುತ್ತಿದ್ದಳು, 'ಚಲನೆಯೇ ಬದುಕು. ನಿಂತು ಬಿಡುವುದು ಸಾವಿಗೆ ಸಮಾನ'. ಅಮ್ಮನ ಈ ಮಾತುಗಳನ್ನೇ ಮನಸ್ಸಿನಲ್ಲಿ ನೆಟ್ಟು, ಬದುಕನ್ನು ಮತ್ತೆ ಸಾವರಿಸಿಕೊಂಡು ಮುನ್ನಡೆಯಲು ಪ್ರಯತ್ನಿಸಿದರು. ತಂದೆಯವರ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ನೋಡಿ ಅವರಿಗೆ ಕೆಲಸದಿಂದ ಆರಾಮ ತೆಗೆದುಕೊಳ್ಳಲು ಭಾವೇಶ್ ಹೇಳಿದರು. ಆದರೆ ತಂದೆ ಆರ್.ಕೆ. ವಾಡಿಯ ಕೆಲಸ ಬಿಡಲು ಬಯಸಿರಲಿಲ್ಲ. ಆ ಒಂದು ಕೋಣೆಯಲ್ಲಿ ಅಮ್ಮನ ಸವಿ ನೆನಪುಗಳಿದ್ದವು.

(ಸಶೇಷ)